ಬೆಂಗಳೂರು ನಗರದಲ್ಲಿರುವ ಸರ್ಕಾರಿ ವಸತಿ ಗೃಹಗಳು.

೨೯೦೯(೩೬೪೫೫)

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ನಗರದಲ್ಲಿ ವಿವಿಧ ಜಾಗಗಳಲ್ಲಿ ಇರತಕ್ಕ ಒಟ್ಟು ಸರ್ಕಾರಿ ವಸತಿ ಗೃಹಗಳ ಸಂಖ್ಯೆ ಎಷ್ಟು?

ಆ. ಈ ಸರ್ಕಾರಿ ವಸತಿ ಗೃಹಗಳನ್ನು ಎಷ್ಟು ಸರ್ಕಾರಿ ನೌಕರರು ಮತ್ತು ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದೆ?

ಇ. ಇವರ ಪೈಕಿ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ಸ್ವಂತ ಮನೆಯನ್ನು ಹೊಂದಿದ್ದು, ಈ ಸರ್ಕಾರಿ ವಸತಿ ಗೃಹಗಳಲ್ಲಿ ವಾಸಿಸುತ್ತಿದ್ದಾರೆ?

ಈ. ಇಂತಹ ನೌಕರರು ಹಾಗೂ ಅಧಿಕಾರಿಗಳನ್ನು ಖಾಲಿ ಮಾಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಬೆಂಗಳೂರು ನಗರದ ವಿವಿಧ ಜಾಗಗಳಲ್ಲಿ ಇರತಕ್ಕ ಒಟ್ಟು ಸರ್ಕಾರಿ ವಸತಿ ಗೃಹಗಳ ಸಂಖ್ಯೆ ೨೫೧೩.

ಆ. ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರ ನೇತೃತ್ವದ ಸಮಿತಿಯಿಂದ ೬೮೧ ವಸತಿಗೃಹಗಳನ್ನು ಎ ಸಮೂಹದ ಅಧಿಕಾರಿಗಳಿಗೆ, ವಿಭಾಗಾಧಿಕಾರಿಗಳ ನೇತೃತ್ವದ ಸಮಿತಿಯಿಂದ ೪೦೧ ವಸತಿಗೃಹಗಳನ್ನು ಬಿ ಸಮೂಹದ ಅಧಿಕಾರಿಗಳಿಗೂ ಮತ್ತು ೧೪೩೧ ವಸತಿ ಗೃಹಗಳನ್ನು ಸಿ ಮತ್ತು ಡಿ ಸಮೂಹದ ನೌಕರರಿಗೂ ಹಂಚಿಕೆ ಮಾಡಲಾಗಿದೆ.

ಇ. ಅಧಿಕಾರಿಗಳು ೭

ನೌಕರರು ೨

ಈ. ಸ್ವಂತ ಮನೆ ಹೊಂದಿ ಸರ್ಕಾರಿ ವಸತಿ ಗೃಹದಲ್ಲಿ ವಾಸಿಸುತ್ತಿರುವವರಿಗೆ ಕರ್ನಾಟಕ ಪಬ್ಲಿಕ್ ಪ್ರಿಮಿಸಸ್(ಎವಿಕ್ಷನ್ ಆಫ್ ಅನ್ ಆಥರೈಸ್ಡ್ ಆಕ್ಯೂಪೇಶನ್) ಆಕ್ಟ್ ೧೯೭೪ರ ಅಡಿಯಲ್ಲಿ ಫಾರಂ ಎ ಫಾರಂ ಬಿ ನೋಟಿಸ್‌ನ್ನು ಸಂಬಂಧಪಟ್ಟ ವಿಭಾಗೀಯ

ಕಚೇರಿಗಳಿಂದ ಜಾರಿ ಮಾಡಲಾಗಿದ್ದು ತೆರವು ಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಬಂಡೀಪುರದಲ್ಲಿನ ಹುಲಿ ಸಂರಕ್ಷಣೆ ಯೋಜನೆಯ ಕಛೇರಿ.

೨೯೧೦(೩೬೪೬)

ಶ್ರೀ ಕಟ್ಟಾ ಸುಬ್ಬಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಡೀಪುರದಲ್ಲಿನ ಹುಲಿ ಸಂರಕ್ಷಣೆ ಯೋಜನೆಯಡಿಯಲ್ಲಿ ಉಪ ಸಂರಕ್ಷಣಾಧಿಕಾರಿಗಳ ನೂತನ ಕಛೇರಿ ಉದ್ಘಾಟನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಕಛೇರಿ ಗುಂಡ್ಲುಪೇಟೆಯಲ್ಲಿ ಖಾಸಗಿ ಕಟ್ಟಡದಲ್ಲಿ ಮುಂದುವರಿಯುತ್ತಿರುವುದಕ್ಕೆ ಕಾರಣಗಳೇನು?

ಇ) ಕೂಡಲೇ ಈ ಕಛೇರಿಯನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳತ್ತದೆಯೇ?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ) ಸದರಿ ಕಛೇರಿಯು ಸ್ಥಳಾಂತರಗೊಂಡಿದ್ದು ಗುಂಡ್ಲುಪೇಟೆಯಲ್ಲಿ ಮುಂದುವರಿಯುತ್ತಿರುವುದಿಲ್ಲ.

ಇ) ಸದರಿ ಕಛೇರಿಯನ್ನು ದಿನಾಂಕ:೧೧-೭-೨೦೦೧ರಂದು ಬಂಡೀಪುರಕ್ಕೆ ಸ್ಥಳಾಂತರಿಸಲಾಗಿದೆ.

ರಾಜ್ಯದಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪನೆ.

೨೯೧೧(೩೬೪೯)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಪಶುಸಂಗೋಪನೆ ಮತ್ತು